30/3/2022ರಂದು ಉತ್ತರಿಸಲಾದ ಚರ್ಚೆ
ನಿ-72
ಸೂ-161

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ ಇವರ ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನೆ ಸಂಖ್ಯೆ:161ಕ್ಕೆ ಉತ್ತರಿಸುವ ಕುರಿತು.**

**ವಿಷಯ:** ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದಿಸುವ ವಿದ್ಯುತನ್ನು ಸರಕಾರ ಪಿ.ಪಿ.ಎ. ಮಾಡಿಕೊಳ್ಳದೇ ಇರುವ ಕುರಿತು ಮತ್ತು ಇದರಿಂದಾಗಿ ಸಕ್ಕರೆ ಕಾರ್ಖಾನೆಗಳು ಹಾನಿ ಅನುಭವಿಸುತ್ತಿವೆ. ಹಾಗೂ ರೈತರಿಗೆ ಕಬ್ಬಿನ ಹಣ ಪಾವತಿ ಮಾಡಲು ತೊಂದರೆ ಆಗುತ್ತಿರುವುದರ ಬಗ್ಗೆ ಚರ್ಚಿಸಲು ವಿದ್ಯುತ್ ಕೊರತೆ ಇರುವ ಈ ಸಂದರ್ಭದಲ್ಲಿ ತಕ್ಷಣವೇ ಸರಕಾರದ ವತಿಯಿಂದ ಕಾರ್ಖಾನೆಯೊಂದಿಗೆ ಪಿ.ಪಿ.ಎ. ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

**ಸರ್ಕಾರದ ಉತ್ತರ:-**

ಕರ್ನಾಟಕ ರಾಜ್ಯದಲ್ಲಿ 89 ನೋಂದಾಯಿತ ಸಕ್ಕರೆ ಕಾರ್ಖಾನೆಗಳು ಇದ್ದು, ಇದರಲ್ಲಿ 53 ಸಕ್ಕರೆ ಕಾರ್ಖಾನೆಗಳು ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿದ್ದು, ಇವುಗಳ ದಿನವಹಿ ಉತ್ಪಾದನಾ ಸಾಮರ್ಥ್ಯ1516.22 ಮೆ.ವ್ಯಾಟ್‌ಗಳಾಗಿರುತ್ತದೆ. ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ಒಟ್ಟು ವಿದ್ಯುತ್‌ನಲ್ಲಿ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆ ಮತ್ತು ಆಂತರಿಕ ಬಳಕೆಗಾಗಿ ಉಪಯೋಗಿಸಿಕೊಂಡು, ಉಳಿದ ವಿದ್ಯುತ್ತನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಪ್ಪಂದದ ಪ್ರಕಾರ ಸರಬರಾಜು ಮಾಡುತ್ತವೆ. ಸಕ್ಕರೆ ಕಾರ್ಖಾನೆಗಳು ಸಕ್ಕರೆ ಮಾರಾಟ ಮತ್ತು ಇತರೆ ಉಪ ಉತ್ಪನ್ನಗಳಾದ ಎಥನಾಲ್, ಸಹ-ವಿದ್ಯುತ್, ರೆಕ್ಟಿಫೈಡ್ ಸ್ಪಿರಿಟ್, ಮೊಲ್ಯಾಸಿಸ್, ಬಗಾಸ್ ಇತ್ಯಾದಿ ಮಾರಾಟದಿಂದ ಬರುವ ಆದಾಯದಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತವೆ.

ಕರ್ನಾಟಕ ರಾಜ್ಯದಲ್ಲಿ ಬಗಾಸೆ ಆಧರಿಸಿದ ಕೋ-ಜೆನರೇಷನ್ ಉತ್ಪಾದಕರಿಂದ ವಿದ್ಯುತ್‌ನ್ನು 2016-17ರಿಂದ 5 ವರ್ಷದ ಮಧ್ಯಮಾವಧಿಗೆ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ : EN 16 PPT 2016, ಬೆಂಗಳೂರು ದಿನಾಂಕ:11.11.2016 ರಲ್ಲಿ ನಿರ್ಧರಿಸಲಾಗಿರುತ್ತದೆ. ಈ ವಿದ್ಯುತ್ ಖರೀದಿ ಒಪ್ಪಂದದ ಅವಧಿಯು ಜನವರಿ 2022ರಲ್ಲಿ ಅಂತ್ಯವಾಗಿರುತ್ತದೆ.

ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಸುವ ಸಂಬಂಧ, ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ.

1. ಸಕ್ಕರೆ ಕಾರ್ಖಾನೆಗಳಿಂದ ಉತ್ಪಾದಿಸುವ ವಿದ್ಯುತ್ತಿನ ವಿದ್ಯುತ್ ಖರೀದಿಗೆ ಕೆ.ಇ.ಆರ್.ಸಿ.ಯ ಅನುಮೋದನೆ ಪಡೆಯಬೇಕಾಗುತ್ತದೆ ಹಾಗೂ ಆರ್ಥಿಕ ವರ್ಷ 2024-25ರವರೆಗೆ ರಾಜ್ಯದಲ್ಲಿ ಹೆಚ್ಚುವರಿ ವಿದ್ಯುತ್ ಲಭ್ಯವಾಗುವುದೆಂದು ಮೆ|| ಪಿ.ಆರ್.ಡಿ.ಸಿ ರವರ ವರದಿಯು ತಿಳಿಸಿದೆ.
2. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ದಿನಾಂಕ:05.06.2018 ಆದೇಶದಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಬಗಾಸ್ ಆಧಾರಿತ ಸಹ ವಿದ್ಯುತ್ ಘಟಕಗಳಿಂದ ಖರೀದಿಸುವ ವಿದ್ಯುತ್ತನ್ನು ಇನ್ನು ಮುಂದೆ Competitive-reverse bidding ಮುಖಾಂತರ ಖರೀದಿಸಬೇಕೆಂದು ಆದೇಶಿಸಲಾಗಿದೆ ಮತ್ತು National Tariff Policy ಪ್ರಕಾರ ಮುಂದಿನ ಎಲ್ಲಾ ವಿದ್ಯುತ್ ಖರೀದಿ ಪ್ರಕ್ರಿಯೆಯು Competitive bidding ಮುಖಾಂತರವೇ ಮಾಡಬೇಕಾಗಿರುತ್ತದೆ.
3. ESCOM ಗಳು/ಪಿ.ಸಿ.ಕೆ.ಎಲ್. ಜೂನ್ 2018 ರಿಂದ ಅಲ್ಪಾವಧಿ/ಮಧ್ಯಮ ಅವಧಿಯ ಮೂಲಕ ಯಾವುದೇ ವಿದ್ಯುತ್ ಖರೀದಿಸಿಲ್ಲ. ಪ್ರಸ್ತುತ, ರಾಜ್ಯವು ಹೆಚ್ಚುವರಿ ವಿದ್ಯುತ್ತನ್ನು IEX/PXIL ವಿದ್ಯುತ್ ವಿನಿಮಯ ಕೇಂದ್ರಗಳು ಹಾಗೂ Deep-e portal ಟೆಂಡರ್‌ಗಳಲ್ಲಿ ಭಾಗವಹಿಸಿ ಆಯಾ ಬ್ಲಾಕ್‌ಗಳಲ್ಲಿ ಹೆಚ್ಚುವರಿ ವಿದ್ಯುತ್ತನ್ನು ಮಾರಾಟ ಮಾಡುತ್ತಿವೆ ಹಾಗೂ ಮಾರ್ಚ್ 2022ರಲ್ಲಿ Grid Overdarwal Deviation Chargesಗಳನ್ನು ಮಿತಿಗೊಳಿಸಲು ಮತ್ತು REC Premium ನಗದೀಕರಿಸಲು 15 ನಿಮಿಷಗಳ ಬ್ಲಾಕ್‌ಗಳಲ್ಲಿ ಅವಶ್ಯವೆನಿಸಿದಾಗ ಎಸ್ಕಾಂಗಳ ಪರವಾಗಿ ವಿದ್ಯುತ್ ವಿನಿಮಯ ಕೇಂದ್ರದ ಮೂಲಕ ವಿದ್ಯುತ್ ಖರೀದಿಸಲಾಗಿದೆ.

ಈ ಮೇಲಿನ ಅಂಶಗಳನ್ನು ಪರಿಗಣಿಸಿ ವಿದ್ಯುತ್ ಖರೀದಿಯ ಅವಶ್ಯಕತೆ ಕಂಡುಬಂದಲ್ಲಿ ವಿದ್ಯುತ್ ಖರೀದಿಯನ್ನು ಮಾಡಬೇಕಾಗಿರುತ್ತದೆ.

---

ಸಿಐ 46 ಎಸ್‌ಜಿಎಫ್ 2022,

(ಶಂಕರ.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು